

‘ಅಪವಾದ ಹಾಕದೆ ಮತ್ತೆ ಎಂತ ಮಾಡ್ಲಿ? ಎಲ್ಲೋ ಬೀದಿಯ ಬದಿಯಲ್ಲಿದ್ದ ಕಪ್ಪು ಬೆಕ್ಕಿನ ಮರಿಯನ್ನು ತಂದು ಸಾಕಿದ್ರಿ. ಯಾರ್‍ಯಾರೋ ಮಾಟ ಮಾಡಿ ಬಿಡ್ತಾರಂತೆ. ನೀವು ನೋಡಿದ್ರೆ ಅದನ್ನೇ ಮನೆಯ ಒಳಗೆ ತಂದಿದ್ದೀರಿ. ಹೊಸಾ ಮನೆಗೆ ಬಂದ ಖುಷಿಯಲ್ಲಿ ನಾನು ಇದ್ರೆ ಆ ಖುಷಿಯೆಲ್ಲ ತೊಳ್ದು ಹೋಯ್ತು. ಇಲ್ಲಿ ಕೇಳಿ. ನೀವಾಗಿ ನೀವು ಬಿಟ್ಟು ಬಂದ್ರೆ ಸರಿ. ಇಲ್ಲಾಂತಾದ್ರೆ ನಾನೇ ಬಿಟ್ಟು ಬರ್ತೇನೆ’ ಅಂತ ಹೇಳಿದವಳೇ ಸೀದಾ ಅಡುಗೆ ಮನೆಗೆ ಹೋದಳು.

ವಿಷ್ಣುಮೂರ್ತಿ ಅಲ್ಲಿಯವರೆಗೆ ಹಾಸಿಗೆಯಲ್ಲಿ ಅರ್ಧ ಕೂತ್ಕೊಂಡು ಮಾತಾಡ್ತಾ ಇದ್ದವ ಪೂರ್ತಿ ಮಲಗಿದ. ಅಂಗಾತ ಮಲಗಿದವ ತಿರುಗ್ತಾ ಇದ್ದ ಫ್ಯಾನನ್ನೇ ದಿಟ್ಟಿಸ್ತಾ ಇದ್ದ. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಒಂದು ವಾರ ಆಗಿತ್ತಷ್ಟೆ. ಇನ್ನೂ ಎರಡು ವಾರ ಕಂಪ್ಲೀಟ್ ರೆಸ್ಟ್ ತೆಗೊಳ್ಬೇಕು ಅಂತ ಡಾಕ್ಟ್ರು ಹೇಳಿದ್ದಿದ್ರು. ಆಫೀಸಿನಲ್ಲಿದ್ದಾಗ ಉಸಿರಾಡ್ಲಿಕ್ಕೆ ಕಷ್ಟ ಆಗಿತ್ತು. ಕೂಡ್ಲೆ ಆಫೀಸಿನಲ್ಲಿ ಇದ್ದವ್ರು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ರು. ಎರಡು ಕಡೆ ಬ್ಲಾಕ್ ಆಗಿದೆ, ಸ್ಟೆಂಟ್ ಹಾಕಬೇಕು ಅಂತ ಡಾಕ್ಟ್ರು ಹೇಳಿದ್ರು. ಎಲ್ಲ ಆಗಿ ಒಂದು ವಾರ ಆಸ್ಪತ್ರೆಯಲ್ಲಿ ಇದ್ದು ಬಂದಿದ್ದ. ಸ್ಮಿತಾಳ ದೃಷ್ಟಿಯಲ್ಲಿ ಇಷ್ಟೆಲ್ಲ ಆಗ್ಲಿಕ್ಕೆ ಅವನು ತಂದಿದ್ದ ಕರಿಬೆಕ್ಕೇ ಕಾರಣ.

ಅವ ಹೊಸ ಫ್ಲ್ಯಾಟ್ ತೆಕ್ಕೊಂಡಿದ್ದ. ಮೂರು ಬೆಡ್ ರೂಂನ ಎಲ್ಲ ಆಧುನಿಕ ವ್ಯವಸ್ಥೆಗಳನ್ನು ಹೊಂದಿದ್ದ ಫ್ಲ್ಯಾಟ್ ಅದು. ಬರೋಬ್ಬರಿ ಒಂದೂವರೆ ಕೋಟಿ ಕೊಟ್ಟಿದ್ದ. ಆಗಷ್ಟೇ ತಾನು ಇದ್ದ ಬಾಡಿಗೆ ಮನೆಯಿಂದ ಅಲ್ಲಿಗೆ ಶಿಫ್ಟ್ ಆಗಿದ್ದ. ಹೊಸ ಏರಿಯಾ, ಹೊಸ ಜನದ ಜೊತೆ ಹೊಂದಿಕೊಳ್ಳಿಕ್ಕೆ ನೋಡ್ತಿದ್ದ. ಒಂದು ದಿನ ಬೆಳಗ್ಗೆ ವಾಕಿಂಗಿಗೆ ಅಂತ ಹೋದವನಿಗೆ ರಸ್ತೆಯ ಅಂಚಿನಲ್ಲಿ ಮ್ಯಾಂವ್ ಮ್ಯಾಂವ್ ಅಂತ ಕಿರಿಚ್ತಾ ಇದ್ದ ಕಪ್ಪು ಬಣ್ಣದ ಬೆಕ್ಕಿನ ಮರಿ ಕಂಡಿತ್ತು. ಆಗಷ್ಟೇ ಕಣ್ಣು ಬಿಟ್ಟ ಮರಿ. ರಸ್ತೆಯ ಅಂಚಿಗೆ ಬರೂದು ಹಿಂದೆ ಹೋಗುದು ಮಾಡ್ತಿತ್ತು. ಅದನ್ನು ತಿನ್ಲಿಕ್ಕೆ ಅಂತ ನಾಯಿ ಒಂದು ಹೊಂಚು ಹಾಕ್ತಾ ಇತ್ತು. ಇವನಿಗೆ ಅದನ್ನು ನೋಡಿದ ಕೂಡ್ಲೆ ಕರುಳು ಚುರುಕ್ ಅಂತು. ಅವನಿಗೆ ಬೆಕ್ಕು ನಾಯಿ ಎಲ್ಲ ಕಂಡ್ರೆ ಕಂಡಾಬಟ್ಟೆ ಪ್ರೀತಿ. ಹಾಗಾಗಿ ಆ ನಾಯಿಯನ್ನು ಹಚಾ ಅಂತ ಓಡಿಸಿ ಬೆಕ್ಕಿನ ಮರಿಯನ್ನು ಎತ್ತಿಕೊಂಡು ಮನೆಗೆ ತಂದಿದ್ದ.

‘ನೋಡೇ ಇಲ್ಲಿ ಯಾರು ಬಂದಿದ್ದಾರೆ ಅಂತ?’ ಹೆಂಡತಿಗೆ ವಾಕಿಂಗಿನಿಂದ ಬಂದವನೇ ಬೆಕ್ಕನ್ನು ತೋರಿಸಿದ. ಅವಳಿಗೆ ಬೆಕ್ಕು ನಾಯಿ ಯಾವುದನ್ನು ಕಂಡ್ರೂ ಆಗ್ತಿರಲಿಲ್ಲ. ನಾಯಿಯನ್ನಾದ್ರೂ ಸಹಿಸಿಕೊಂಡಾಳು. ಎಂತಕ್ಕೆ ಅಂದ್ರೆ ಅವಳ ತವರು ಮನೆಯಲ್ಲಿ ಒಂದು ನಾಯಿ ಇತ್ತು. ಆದ್ರೆ ಬೆಕ್ಕು ಅಂದ್ರೆ ಗಲೀಜು ಅನ್ನೂದೇ ಅವಳ ತೀರ್ಮಾನ. ಅವಳಿಗೆ ಕಂಡಾಬಟ್ಟೆ ಕ್ಲೀನಿನ ಗಿರ. ಎಂತ ಕಂಡ್ರೂ ತೊಳೀತಾ ಇರ್ಬೇಕು, ತೊಳೀತಾ ಇರ್ಬೇಕು. ಅಂಥವಳು ಇವ ಬೆಕ್ಕನ್ನು ತಂದದ್ದು ನೋಡಿ ಹೌಹಾರಿ ಬಿದ್ದಳು.

‘ಇಶ್ಶೀ... ಇದರ ರೋಮ ಎಲ್ಲ ಉದುರ್ತದೆ ವ್ಯಾಕ್... ಗಲೀಜು. ಇದು ಈ ಮನೆಯಲ್ಲಿ ಇರೂದೇ ಬೇಡ’ ಅಂತ ಗಲಾಟೆ ಮಾಡಿದ್ದಳು. ಅವನ ಮಗಳಿಗೆ ಸಾ ಅವನ ಹಾಗೆ ಬೆಕ್ಕು ನಾಯಿ ಅಂದ್ರೆ ಪ್ರಾಣ. ‘ನಾನು, ಅಪ್ಪ ಇದರ ಕೇರ್ ಟೇಕರ್ ಆಗಿ ಇರ್ತೇವೆ. ನೀನು ತಲೆಬಿಸಿ ಮಾಡುದೇ ಬೇಡ’ ಅಂತ ಅವಳು ಅಂದಿದ್ದಳು. ‘ಎಂತ ಬೇಕಾದ್ರೂ ಮಾಡಿಕೊಳ್ಳಿ. ಅದು ನಾನು ಇರೂವಾಗ ನನ್ನ ಕಾಲ ಅಡಿಗೆ, ಕಿಚನ್ನಿಗೆ ಎಲ್ಲಿಗೆ ಸಾ ಬರ್ಬಾರ್ದು. ಬಂದ್ರೆ ಮಾತ್ರ ನಾನು ಕಿಟಕಿಯಿಂದ ಆಚೆ ಬಿಸಾಡಿ ಬಿಡ್ತೇನೆ ನೋಡಿ’ ಅಂತ ಅಪ್ಪ ಮಗಳ ಎದುರು ಹೂಂಕರಿಸಿದ್ದಳು.